ಹುನಗುಂದ ತಾಲ್ಲೂಕಿನ ಗುಡೂರು ಗ್ರಾಮಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

೯೯ (೨೧) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುಳೇದಗುಡ್ಡ ಕ್ಷೇತ್ರದ ಹುನಗುಂದ ತಾಲ್ಲೂಕಿನ ಗುಡೂರ ಗ್ರಾಮಕ್ಕೆ ಕುಡಿಯುವ ನೀರಿನ ಶಾಶ್ವತ ಪರಿಹಾರದ ಬಗ್ಗೆ ಸರಕಾರವು ಯೋಜನೆಯನ್ನೇನಾದರೂ ಸಿದ್ಧಪಡಿಸಿದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?

ಇ) ಈಗಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪನ್ನು ಅಳವಡಿಸಿ ಮೇಲ್ಮಟ್ಟದ ತೊಟ್ಟಿಯ ನಳದ ಮುಖಾಂತರ ನೀರು ಸರಬರಾಜು ಮಾಡುವ ಯೋಜನೆ ಸರಕಾರದವರಲ್ಲಿದೆಯೇ, ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಯೋಜನೆ ಸಿದ್ಧವಾಗಿದೆ.

ಆ) ರೂ. ೫.೨೦ ಲಕ್ಷದ ಅಂದಾಜು ಪತ್ರಿಕೆಯನ್ನು ಸಿದ್ಧಪಡಿಸಲಾಗಿದೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಸ್ವಾಮಿ, ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಹುನಗುಂದ ತಾಲ್ಲೂಕಿನ ಅಮೀನಗಡ, ಮತ್ತು ಸೂಳಿಬಾವಿ, ಬಾಗಲಕೋಟೆ ತಾಲ್ಲೂಕಿನ ಬೆಳೂರ ಈ ಪ್ರದೇಶದಲ್ಲಿ ಕುಡಿಯುವ ನೀರಿಗೆ ಬಹಳ ಅಭಾವ ಇದ್ದು ಇದರ ಶಾಶ್ವತ ಪರಿಹಾರದ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ? ಎನ್ನುವ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಈ ಯೋಜನೆ ಸಿದ್ಧವಾಗಿದೆ, ಈ ಯೋಜನೆ ಪರಿಶೀಲನೆಯಲ್ಲಿದೆ, ಇದರ ಅಂದಾಜು ಸಿದ್ಧವಾಗಿದೆ, ಇದಕ್ಕೆ ಸಂಬಂಧಪಟ್ಟ ನೀಲಿ ನಕ್ಷೆ ತಯಾರಾಗಿದೆ ಹೀಗೆ ಮುಂತಾಗಿ ಪ್ರತಿಯೊಂದಕ್ಕೂ ಸರ್ಕಾರದ ವತಿಯಿಂದ ಕೊಟ್ಟಿರತಕ್ಕ ಉತ್ತರಗಳನ್ನು ಕಳೆದ ಒಂದು ವರ್ಷದಿಂದಲೂ ಕೇಳುತ್ತಲೇ ಬಂದಿದ್ದೇನೆ. ಆದರೆ ಇದುವರೆಗೂ ಇದರಲ್ಲಿ ಯಾವುದೂ ಕೂಡ ಕಾರ್ಯಗತವಾಗಿಲ್ಲ. ಇತ್ತೀಚೆಗೆ ಮಾನ್ಯ ಸಚಿವರು ನಮ್ಮ ಹುನಗುಂದಕ್ಕೆ ಬಂದಿದ್ದಾಗ ಅಲ್ಲಿ ಕುಡಿಯುವ ನೀರಿಗೆ ಎಷ್ಟು ಕಷ್ಟ ಇದೆ ಎಂಬುದನ್ನು ಸ್ವತಃ ಕಣ್ಣಾರೆ ನೋಡಿಕೊಂಡು ಬಂದಿದ್ದಾರೆ. ಆದರೂ ಕೂಡ ಇನ್ನೂ ಈ ಯೋಜನೆಯ ಬಗ್ಗೆ ತಮ್ಮ ನಿಲುವನ್ನು ಹರಿಸಿ ಕಾರ್ಯಗತ ಮಾಡಿಲ್ಲ. ಈಗಲೂ ಕೂಡ ಈ ಯೋಜನೆ ಸಿದ್ಧವಾಗಿದೆ ಎಂದೆ ಹೇಳಿದ್ದಾರೆ. ಆದ್ದರಿಂದ ಈ ವರ್ಷದಲ್ಲಾದರೂ ಇದನ್ನು ಕಾರ್ಯಗತ ಮಾಡಲು ಆಶ್ವಾಸನೆ ಕೊಡುತ್ತಾರೆಯೆ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಲ್ಲಿ ನೀರಿನ ತೊಂದರೆ ಇದೆ. ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಈ ಪ್ರದೇಶದಲ್ಲಿರತಕ್ಕೆ ಎಲ್ಲ ಜನರಿಗೂ ತಲಾ ೮ ಲೀಟರ್‌ನಷ್ಟು ನೀರು ಈಗ ಸಿಕ್ಕುತ್ತಿದೆ. ಇದನ್ನು ಇನ್ನೂ ಹೆಚ್ಚು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ಎಲ್ಲ ಗ್ರಾಮಗಳ ನೀರು ಪೂರೈಕೆಯ ಬಗ್ಗೆ ಅಂದಾಜುಗಳನ್ನು ಸಿದ್ಧಪಡಿಸುತ್ತಿದ್ದೇವೆ. ಈ ಯೋಜನೆ ರಾಷ್ಟ್ರೀಯ ಯೋಜನೆಗಾಗಲಿ, ಅಥವಾ ಕೇಂದ್ರದ ಯೋಜನೆಗಾಗಲಿ ಒಳಪಟ್ಟಿಲ್ಲ. ಆದ್ದರಿಂದ ಸ್ವಲ್ಪ ತಡವಾಗಿದೆ. ಆದರೂ ಮುಂದಿನ ವರ್ಷ ಇದನ್ನು ಕಾರ್ಯಗತ ಮಾಡಲು ಪ್ರಯತ್ನಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ವಿ ಬನ್ನಿ.—ಸ್ವಾಮಿ, ಇಷ್ಟು ತೊಂದರೆ ಇದೆ ಎಂಬುದು ಗೊತ್ತಿದ್ದರೂ ಮುಂದಿನ ವರ್ಷ ಎಂದು ಈಗಲೂ ಹೇಳುತ್ತಿದ್ದೀರಿ...

ಶ್ರೀ ಅಬ್ದುಲ್ ನಜೀರ್‌ಸಾಬ್,—ಮುಂದಿನ ವರ್ಷ ಎಂದರೆ ಈ ಪ್ರಸಕ್ತ ವರ್ಷದಲ್ಲೇ ತೆಗೆದುಕೊಂಡು ಮಾಡಿಸುತ್ತೇವೆ.